


ಶಾರ್ಜಾ– ಖೋರ್‌ಫಕ್ಕಾನ್ ಹೆದ್ದಾರಿಯಲ್ಲಿನ ಸುರಂಗ



ಪರ್ವತದ ಮೇಲೊಂದು ಟವರ್

ಸುವಿಶಾಲ ಹೆದ್ದಾರಿಯಲ್ಲಿ ಕಾರು ಓಡಿಸುವುದೂ ಒಂದು ಸಂಭ್ರಮ. ಇಲ್ಲಿ ಸ್ವಚ್ಛತೆಗೆ ಎಷ್ಟು ಗಮನ ಕೊಟ್ಟಿದ್ದಾರೆಂದರೆ ಪ್ರತಿ ಐದು ಕಿ.ಮೀ.ಗೆ ಒಂದರಂತೆ ಹೆದ್ದಾರಿ ಬದಿಯಲ್ಲಿ ದೊಡ್ಡ ಡಸ್ಟ್‌ಬಿನ್‌ಗಳನ್ನು ಇಟ್ಟಿದ್ದಾರೆ! ಕಾರಿನಲ್ಲಿ ಹೋಗುವವರು ಏನನ್ನಾದರೂ ತಿಂದರೆ ಪ್ಲಾಸ್ಟಿಕ್ ಪೊಟ್ಟಣವನ್ನು ಕಾರು ನಿಲ್ಲಿಸಿ ಡಸ್ಟ್‌ಬಿನ್‌ನಲ್ಲೇ ಹಾಕಬೇಕು. ಕಿಟಕಿಯ ಹೊರಗೆ ಸ್ವಚ್ಛಂದವಾಗಿ ತೂರುವಂತಿಲ್ಲ.

‘ಕೊಲ್ಲಿ ದೇಶಗಳಲ್ಲಿ ಕಾರು ಚಾಲಕರು ಟ್ರಾಫಿಕ್ ಪೊಲೀಸರಿಗೆ ಹೆದರುವುದಿಲ್ಲ. ಪೊಲೀಸರು ಹೆದ್ದಾರಿಯಲ್ಲಿ ಕಾಣಸಿಗುವುದೂ ಇಲ್ಲ. ಆದರೆ ಹೆದ್ದಾರಿಯ ಸ್ವಯಂಚಾಲಿತ ಕ್ಯಾಮೆರಾಗಳು ಕ್ಲಿಕ್ಕಿಸುವ ಫೋಟೊಗಳಿಗೆ ಹೆದರುತ್ತಾರೆ. ಟ್ರಾಫಿಕ್ ನಿಯಮ ಉಲ್ಲಂಘಿಸಿದ ಮರುಕ್ಷಣವೇ ಠಣ್ಣೆಂದು ನಿಮ್ಮ ಮೊಬೈಲ್‌ನಲ್ಲಿ ಮೆಸೇಜಿನ ರೂಪದಲ್ಲಿ ಬಂದು ಬೀಳುವ ದಂಡದ ದುಬಾರಿ ಮೊತ್ತಕ್ಕೆ ಹೆದರುತ್ತಾರೆ’ ಎಂದು ಡ್ರೈವ್ ಮಾಡುತ್ತಿದ್ದ ಗೆಳೆಯ ಅಕ್ಬರ್ ಅಲಿ ಹೇಳಿದ್ದು ಸುಳ್ಳಲ್ಲ. ಅದರ ಹೊರತಾಗಿಯೂ ಈ ಹೆದ್ದಾರಿಯಲ್ಲಿ ವೇಗಮಿತಿ 120 ಕಿ.ಮೀ. ಇರುವುದರಿಂದ ನಮ್ಮ ಪಯಣ ಚೇತೋಹಾರಿಯಾಗಿತ್ತು. ನಡುನಡುವೆ ಸಿಗುವ ಸುರಂಗ ಮಾರ್ಗದಲ್ಲಿ ವೇಗಮಿತಿಯನ್ನು 40 ಕಿ.ಮೀ.ಗೆ ಇಳಿಸಲಾಗಿದೆ. ಇಲ್ಲಿಯ ಹೆದ್ದಾರಿಗಳಲ್ಲಿ ವೇಗಮಿತಿಗಿಂತ 20 ಕಿ.ಮೀ. ಹೆಚ್ಚು ವೇಗದಲ್ಲಿ ಓಡಿಸಿದರೂ ದಂಡ ಬೀಳುವುದಿಲ್ಲ ಎನ್ನುವುದು ರಿಯಾಯ್ತಿ.

ಶಾರ್ಜಾದಿಂದ ಖೋರ್‌ಫಕ್ಕಾನ್‌ಗೆ ಹೋಗಬೇಕೆಂದರೆ ಹಿಂದೆ ಶಾರ್ಜಾ–ಕಲ್ಬಾ ಹೆದ್ದಾರಿಯಲ್ಲಿ ಹಜಾರ್ ಪರ್ವತ ಶ್ರೇಣಿಗಳನ್ನು ಸುತ್ತಿ ಬಳಸಬೇಕಿತ್ತು. ಅದು 135 ಕಿ.ಮೀ. ದೂರದ ಪಯಣವಾಗಿತ್ತು. ಆದರೆ 2018ರಲ್ಲಿ ಉದ್ಘಾಟನೆಯಾದ ಹೊಸ ಹೆದ್ದಾರಿಯಿಂದಾಗಿ ಈ ಅಂತರ 89 ಕಿ.ಮೀ.ಗೆ ಇಳಿದಿದೆ. ದುರ್ಗಮ ಪರ್ವತ ಪ್ರದೇಶಗಳಲ್ಲಿ ಎಂಜಿನಿಯರಿಂಗ್ ನೈಪುಣ್ಯದಿಂದ ಕೊರೆದ ಸುರಂಗ ಮಾರ್ಗಗಳು ಈ ಅಂತರ ಇಳಿಯಲು ಮುಖ್ಯ ಕಾರಣ. ಮನೆಯಲ್ಲೇ ಮಾಡಿ ತಂದ ಬಿರಿಯಾನಿ ನಮ್ಮ ಕಾರಿನ ಡಿಕ್ಕಿಯೊಳಗಿತ್ತು. 60 ಕಿ.ಮೀ.ಗಳಷ್ಟು ಕ್ರಮಿಸಿದ ಬಳಿಕ ಪರ್ವತ ಶ್ರೇಣಿಗಳಿಂದ ಸುತ್ತುವರಿದ ಜನವಸತಿಯಿಲ್ಲದ ಒಂದು ಸುಂದರ ತಾಣದಲ್ಲಿ ನಿಲ್ಲಿಸಿ ಊಟ ಮಾಡಿದೆವು. ನಮ್ಮಂತೆಯೇ ಹತ್ತಾರು ಕಾರುಗಳು ಆ ಪ್ರದೇಶದಲ್ಲಿ ನಿಂತಿದ್ದವು. ಕೆಲವರು ಕಾರಿನಿಂದ ಇಳಿದು ಹೆದ್ದಾರಿ ಬದಿಯ ಪುಟ್ಟ ಬೆಟ್ಟಗಳನ್ನು ಏರುತ್ತಿದ್ದರು. ಫೋಟೊಗಳನ್ನು ಕ್ಲಿಕ್ಕಿಸುತ್ತಿದ್ದರು.

ಶಾರ್ಜಾ–ಖೊರ್‌ಫಕ್ಕಾನ್ ಹೆದ್ದಾರಿಯಲ್ಲಿ ಒಟ್ಟು ಐದು ಸುರಂಗಗಳು ಸಿಗುತ್ತವೆ. ಹೋಗಲು ಮತ್ತು ಬರಲು ಪ್ರತ್ಯೇಕ ಸುರಂಗಗಳು. ಇವುಗಳಲ್ಲಿ ಅತ್ಯಂತ ಉದ್ದನೆಯ ಸುರಂಗ ಸುಮಾರು 2.7 ಕಿ.ಮೀ.ಗಳಷ್ಟಿದ್ದರೆ, ಅತ್ಯಂತ ಸಣ್ಣ ಸುರಂಗದ ಉದ್ದ 300 ಮೀಟರ್. ಸುರಂಗದ ಒಳಗೆ ರಾತ್ರಿ–ಹಗಲುಗಳ ವ್ಯತ್ಯಾಸವೇ ಗೊತ್ತಿಲ್ಲದಷ್ಟು ವಿದ್ಯುತ್ ಬೆಳಕಿದೆ. ವರ್ಷದ ಬಹುತೇಕ ತಿಂಗಳುಗಳಲ್ಲಿ 50 ಡಿಗ್ರಿ ದಾಟುವ ರಣಬಿಸಿಲಿನಲ್ಲಿ ದುರ್ಗಮ ಪರ್ವತ ಪ್ರದೇಶದಲ್ಲಿ ನೂರಾರು ಕಾರ್ಮಿಕರು ಬೆವರಿಳಿಸಿ ದುಡಿದು ಈ ಸುರಂಗಗಳನ್ನು ಕೊರೆದು ರಸ್ತೆ ನಿರ್ಮಿಸಲು ಸುಮಾರು 14 ವರ್ಷಗಳೇ ಹಿಡಿಯಿತಂತೆ. ಐದೂವರೆ ಶತಕೋಟಿ ದಿರ್ಹಮ್ ವೆಚ್ಚದ ಹೆದ್ದಾರಿಯಿದು.

ಖೊರ್‌ಫಕ್ಕಾನ್ ನಗರ ಸಿಗುವುದಕ್ಕೆ ಮುನ್ನವೇ ಎತ್ತರದ ಹೆದ್ದಾರಿಯ ಎಡಬದಿಯಲ್ಲಿ ವಿಶಾಲವಾದ ಅಲ್ ರಫೀಸಾಹ್ ಅಣೆಕಟ್ಟಿನ ಹಿನ್ನೀರು ಕಾಣಿಸುತ್ತದೆ. ಏರಿಳಿತದ ಪರ್ವತ ಶ್ರೇಣಿಗಳಲ್ಲಿ ಹರಿದು ಬರುವ ನೀರನ್ನು ಇಲ್ಲಿ ನೈಸರ್ಗಿಕ ಪರ್ವತಗಳ ಮಧ್ಯೆ ತಡೆದು ನಿಲ್ಲಿಸಲಾಗಿದೆ. ಹೆದ್ದಾರಿಯ ನಿರ್ಮಾಣಕ್ಕಿಂತ ಎಷ್ಟೋ ವರ್ಷಗಳ ಮೊದಲು, 1980ರಲ್ಲಿ ಈ ಅಣೆಕಟ್ಟು ನಿರ್ಮಾಣವಾಗಿದೆ. ಚಳಿಗಾಲದಲ್ಲಿ ಅಣೆಕಟ್ಟಿನಲ್ಲಿ ಹಿನ್ನೀರಿನ ಮಟ್ಟ ಹೆಚ್ಚು ಎತ್ತರವಿರುತ್ತದೆ, ಬಿರುಬೇಸಿಗೆಯಲ್ಲಿ ಎಲ್ಲ ನೀರೂ ಬತ್ತಿ ತಳ ಕಾಣಿಸುವುದುಂಟು. ನಮ್ಮ ಆಲಮಟ್ಟಿ–ಕೆ.ಆರ್.ಎಸ್. ಜಲಾಶಯಗಳಿಗೆ ಹೋಲಿಸಿದರೆ ಇದೊಂದು ಪುಟ್ಟ ಅಣೆಕಟ್ಟು. ಆದರೆ ನಾಲ್ಕೂ ದಿಕ್ಕಿನಲ್ಲಿ ಸುತ್ತುವರಿದಿರುವ ಬೆಟ್ಟ ಶ್ರೇಣಿಗಳಿಂದಾಗಿ ಈ ಜಲಾಶಯವು ವಿಶಿಷ್ಟ ಸೌಂದರ್ಯದಿಂದ ಕಂಗೊಳಿಸುತ್ತದೆ. ಸಂಜೆಯ ಇಳಿ ಬೆಳಕಿನಲ್ಲಂತೂ ಪ್ರವಾಸಿಗರು ಮಂತ್ರಮುಗ್ಧರಾಗುತ್ತಾರೆ.

ನಾವು ಹೋದದ್ದು ಡಿಸೆಂಬರ್ ಹೊತ್ತಿಗಾದ್ದರಿಂದ ಜಲಾಶಯದಲ್ಲಿ ನೀರು ತುಂಬಿತ್ತು. ಹೆದ್ದಾರಿಯಲ್ಲಿ ಹೋಗುವ ಪ್ರವಾಸಿಗರನ್ನು ತಡೆದು ನಿಲ್ಲಿಸಲು ಬೇಕಾದ ಎಲ್ಲ ಸೌಲಭ್ಯಗಳೂ ಇಲ್ಲಿವೆ. ಕಣ್ಣು ತಂಪಾಗಿಸುವ ಪುಟ್ಟ ಉದ್ಯಾನವನ, ಅಲ್ಲಲ್ಲಿ ವಿಶ್ರಮಿಸಲು ಕಲ್ಲು ಬೆಂಚುಗಳು, ಬೋಟಿಂಗ್ ಸೌಲಭ್ಯ, ರೆಸ್ಟೋರೆಂಟ್‌ಗಳು, ಜಲಾಶಯದ ಸುತ್ತ ಪಾಮ್ ಮರಗಳ ಮಧ್ಯೆ ಸುಮಾರು ಒಂದು ಕಿ.ಮೀ. ಉದ್ದದ ವಾಕಿಂಗ್ ಟ್ರ್ಯಾಕ್. ಕಣ್ಣು ಕಿರಿದಾಗಿಸಿ ಜಲಾಶಯದ ಆ ಬದಿಯಲ್ಲಿರುವ ಪರ್ವತ ಶ್ರೇಣಿಗಳನ್ನು ಗಮನಿಸಿದಾಗ ದೂರದಲ್ಲಿ ಪರ್ವತ ಶ್ರೇಣಿಯ ಮೇಲೆ ಬಳುಕಿದಂತೆ ಇದ್ದ ಕಾಲುದಾರಿಯಲ್ಲಿ ಹತ್ತಾರು ಜನರು ಹತ್ತುವುದೂ ಕಾಣಿಸಿತು! ವಾಕಿಂಗ್ ಮಾಡುತ್ತಾ ಅಣೆಕಟ್ಟಿನ ಮೇಲಿನ ರಸ್ತೆಯವರೆಗೆ ಹೋಗಬಹುದು.

ಈ ಜಲಾಶಯದಿಂದ ಹೆದ್ದಾರಿಯಲ್ಲಿ ಸ್ವಲ್ಪ ಮುಂದಕ್ಕೆ ಹೋದರೆ ಖೊರ್‌ಫಕ್ಕಾನ್ ನಗರ ಕಾಣಿಸುತ್ತದೆ. ಅದಕ್ಕೂ ಮುನ್ನ ಪರ್ವತ ಶ್ರೇಣಿಯ ತಪ್ಪಲಲ್ಲಿ ಪುಟ್ಟದೊಂದು ಹಳ್ಳಿಯಿದೆ. ಅದರ ಎಡಬದಿಯಲ್ಲಿ ಎತ್ತರದ ಪರ್ವತದ ಮೇಲೊಂದು ಟವರ್. ನೂರಾರು ವರ್ಷಗಳ ಹಿಂದೆ ಆ ಪರ್ವತದ ಮೇಲೆ ಒಂದು ಹಳ್ಳಿಯಿತ್ತಂತೆ. ಅಲ್ಲಿದ್ದ ಸಾಂಪ್ರದಾಯಿಕ ಶೈಲಿಯ ಮನೆಗಳನ್ನು ಮರುಸೃಷ್ಟಿ ಮಾಡಲಾಗಿದೆ. ತಿರುವುಗಳಲ್ಲಿ ಮೆಟ್ಟಿಲುಗಳನ್ನು ಏರುತ್ತಾ ಹೋದಂತೆ ಮರಗಳಿಂದ ನಿರ್ಮಿಸಿದ ಮನೆಗಳು ಕಾಣಸಿಗುತ್ತವೆ. ಟವರ್ ಒಳಗೂ ಮೆಟ್ಟಿಲುಗಳಿದ್ದು ಮೇಲಕ್ಕೆ ಹೋದರೆ ಕೆಳಗಿನ ವಿಹಂಗಮ ದೃಶ್ಯ ಮುದ ನೀಡುತ್ತದೆ. ಇಲ್ಲಿ ಸುತ್ತಾಡುವಾಗ ಶಾರ್ಜಾ ಎನ್ನುವುದೊಂದು ಮರುಭೂಮಿಯ ದೇಶ ಎನ್ನುವುದು ಮರೆತೇ ಹೋಗುತ್ತದೆ.

ದುಬೈ ಮತ್ತು ಶಾರ್ಜಾದಲ್ಲಿರುವ ಭಾರತೀಯರಿಗೆ ಖೊರ್‌ಫಕ್ಕಾನ್ ಒಂದು ದಿನದ ಪ್ರವಾಸಕ್ಕೆ ಹೇಳಿ ಮಾಡಿಸಿದ ತಾಣ. ಖೊರ್‌ಫಕ್ಕಾನ್ ನಗರವು ಅರೇಬಿಯಾದ ಪೂರ್ವ ಕಡಲ ತೀರದಲ್ಲಿ ಇರುವುದರಿಂದ ಇಲ್ಲಿರುವ ಬೀಚ್‌ಗೂ ಪ್ರತಿದಿನ ನೂರಾರು ಜನರು ಭೇಟಿ ನೀಡುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in